ಸಜ್ಜೆ



ಸಜ್ಜೆ ಕರ್ನಾಟಕ ರಾಜ್ಯದ ಮುಖ್ಯ ಆಹಾರ ಬೆಳೆಯಾಗಿದ್ದು, ಈ ಬೆಳೆಯನ್ನು ಮಧ್ಯಮ ಕಪ್ಪು ಹಾಗೂ ಕಡಿಮೆ ಆಳವಿರುವ ಮಣ್ಣಿನಲ್ಲಿ ಮುಂಗಾರು ಹಾಗೂ ಬೇಸಿಗೆ ಕಾಲದಲ್ಲಿಯೂ ಬೆಳೆಯಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಈ ಬೆಳೆಯನ್ನು (ನೀರಾವರಿ ಹಾಗೂ ಖುಷ್ಕಿ) 10201 ಹೆಕ್ಟೇರ ಕ್ಷೇತ್ರದಲ್ಲಿ ಬೆಳೆಯುತ್ತಿದ್ದು, 9177 ಲಕ್ಷ ಟನ್ ಉತ್ಪಾದನೆ ಹೊಂದಿದೆ. ಸರಾಸರಿ ಹೆಕ್ಟೇರಿಗೆ 9 ಕ್ವಿಂಟಾಲ್ ಇರುವುದು.

ತಳಿಗಳು

ಐಸಿಎಂಎ 221 ತಳಿಯು ವಲಯ 3 ಕ್ಕೆ ಶಿಫಾರಸು ಮಾಡಲಾಗಿದ್ದು, ನೀರಾವರಿ ಹಾಗೂ ಮಳೆಯಾಶ್ರಿತ ಪ್ರದೇಶಕ್ಕೆ ಸೂಕ್ತ.

ಅವಧಿ: 75–85 ದಿವಸ, ತಳಿಯ ವಿಶೇಷತೆ ಕೆಳಗೆ ಬೀಳುವುದಿಲ್ಲ ಹಾಗೂ ಹೆಚ್ಚು ಕವಲೊಡೆದು ಒಂದೇ ಸಮನಾಗಿ ತೆನೆಗಳು ಬರುತ್ತವೆ.

ಐಸಿಟಿಪಿ–8203– ತಳಿಯು ವಲಯ 1,2 ಮತ್ತು 3 ಕ್ಕೆ ಶಿಫಾರಸ್ಸು ಮಾಡಲಾಗಿದ್ದು ನೀರಾವರಿ ಹಾಗೂ ಮಳೆಯಾಶ್ರಿತ ಪ್ರದೇಶಕ್ಕೆ ಸೂಕ್ತ ತಳಿ.

ಅವಧಿ: 70–80 ದಿವಸಗಳು

ಬಿತ್ತನೆಗೆ ಬೇಕಾಗುವ ಸಾಮಗ್ರಿಗಳು: (ಪ್ರತಿ ಹೆಕ್ಟೇರಿಗೆ)

ಬೀಜ: ವಲಯ 1 & 2 4 ಕಿ.ಗ್ರಾಂ.
ವಲಯ 3 5.0 ಕಿ.ಗ್ರಾಂ.

ಜೈವಿಕ ಗೊಬ್ಬರ: ಅಜೋಸ್ಪಿರಿಲಂ–500 ಗ್ರಾಂ.
ರಂಜಕ ಕರಗಿಸುವ –375 ಗ್ರಾಂ.
ಅಣುಜೀವಿ ಗೊಬ್ಬರ–

ಸಾವಯವ ಗೊಬ್ಬರ:

ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೊಸ್ಟ್ 06 ಟನ್

ರಾಸಾಯನಿಕ ಗೊಬ್ಬರಗಳು	ನೀರಾವರಿ	ಖುಷ್ಕಿ
ಸಾರಜನಕ	100 ಕಿ.ಗ್ರಾಂ.	50 ಕಿ. ಗ್ರಾಂ.
ರಂಜಕ	50 ಕಿ.ಗ್ರಾಂ.	25 ಕಿ.ಗ್ರಾಂ.
ಪೊಟ್ಯಾಷ್	25 ಕಿ.ಗ್ರಾಂ.	–

ಬಿತ್ತನೆ ನೀರಾವರಿ:

ಬಿತ್ತನೆ ಮಳೆಯಾಶ್ರಿತ: ಬಿತ್ತುವುದಕ್ಕಿಂತ 2–3 ವಾರಗಳ ಮುಂಚೆ ಸಾವಯವ ಗೊಬ್ಬರವನ್ನು ಹಾಗೂ ಬಿತ್ತನೆ ಮಾಡುವ ಮೊದಲು ಪೂರ್ತಿ ರಸ ಗೊಬ್ಬರಗಳನ್ನು ಮಣ್ಣಿನಲ್ಲಿ ಬೆರೆಸಬೇಕು. ಬೀಜವನ್ನು ಬಿತ್ತನೆಗೆ ಮುಂಚೆ 10 ಗಂಟೆಗಳವರೆಗೆ ನೀರಿನಲ್ಲಿ ನೆನಸಿ ನಂತರ 2–3 ಗಂಟೆ ನೆರಳಿನಲ್ಲಿ ಒಣಗಿಸಿ ಶಿಪಾರಸು ಮಾಡಿದಂತೆ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ಬೀಜವನ್ನು 45–60 ಸೆಂ.ಮೀ. ಅಂತರದ ಸಾಲಿನಲ್ಲಿ ಬಿತ್ತಿ 15 ಸೆಂ.ಮೀ. ಅಂತರಕ್ಕೆ ಒಂದು ಸಸಿಯಂತೆ ಉಳಿಸಿ ಉಳಿದವುಗಳನ್ನು ಬಿತ್ತಿದ ಮೂರು ವಾರದೊಳಗೆ ಕಿತ್ತು ಹಾಕಬೇಕು.

ವಲಯ 3 ರಲ್ಲಿ ಸಜ್ಜೆಯನ್ನು 120 ಸೆಂ.ಮೀ ಅಂತರದ ಅಗಲವಾದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 5 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು.

ಅಂತರ ಬೇಸಾಯ:

ಬಿತ್ತನೆಯಾದ 20 ದಿನಗಳ ನಂತರ ತೆನೆ ಬರುವ ತನಕ 2 ರಿಂದ 3 ಬಾರಿ ಅಂತರ ಬೇಸಾಯ ಮಾಡಬೇಕು. ಮೊದಲನೆಯ ಅಂತರ ಬೇಸಾಯದ ನಂತರ ಒಂದು ಬಾರಿ ಕೈಗಳೆ ಮಾಡಿ ಬಿತ್ತನೆಯಾದ 4 ವಾರಗಳ ನಂತರ ಮಣ್ಣೇರಿಸಬೇಕು.

ಸಜ್ಜೆಯನ್ನು 30 ಸೆಂ.ಮೀ. ಮತ್ತು 60 ಸೆಂ.ಮೀ. ಅಂತರದ ಜೋಡು ಸಾಲುಗಳಲ್ಲಿ ಇಲ್ಲವೇ 45 ಸೆಂ.ಮೀ. ಅಂತರದ ಸಾಮಾನ್ಯ ಸಾಲಿನಲ್ಲಿ ಬಿತ್ತನೆ ಮಾಡಿ, ಬಿತ್ತನೆಯಾದ 30–35 ದಿನಗಳ ನಂತರ ಎರಡು ಸಜ್ಜೆ ಸಾಲುಗಳ ಮಧ್ಯದಲ್ಲಿ ರಂಟೆಯಿಂದ ಅಥವಾ ಅಂತರ ಬೇಸಾಯ ಮಾಡುವ ದಿಂಡಿಯಿಂದ ಬೋದು ಸಾಲುಗಳನ್ನು ಮಾಡುವುದರಿಂದ ಹೆಚ್ಚು ಪ್ರಮಾಣದಲ್ಲಿ ಮಳೆಯ ನೀರು ಸಂಗ್ರಹವಾಗಲು ಸಾಧ್ಯವಾಗುವುದು.

ಕಳೆ ನಿಯಂತ್ರಣ: ಅಟ್ರಾಜಿನ್ 50 ಡಬ್ಲು.ಪಿ. ಕಳೆ ನಾಶಕವನ್ನು ಬಿತ್ತನೆ ಮಾಡಿದ ಕೂಡಲೇ ಸಿಂಪರಣೆ ಮಾಡಲು ಸಾಧ್ಯವಾಗದೇ ಇರುವ ಸಂದರ್ಭದಲ್ಲಿ, ಬಿತ್ತನೆ ಮಾಡಿದ 18–20 ದಿವಸಗಳ ನಂತರ ಅಥವಾ ಕಳೆಗಳು 2 ರಿಂದ 3 ಎಲೆಗಳ ಹಂತದಲ್ಲಿರುವಾಗ ಎಕರೆಗೆ 320 ಗ್ರಾಂ. ಪ್ರಮಾಣದಲ್ಲಿ ಕಳೆಗಳ ಮೇಲೆ ಸಿಂಪರಣೆ ಮಾಡಬೇಕು. ಪ್ರತಿ ಎಕರೆಗೆ 300 ಲೀಟರ ಸಿಂಪರಣ ದ್ರಾವಣ ಅವಶ್ಯಕ. ಬಿತ್ತನೆ ಮಾಡಿದ 35 ದಿವಸಗಳ ನಂತರ ಒಂದು ಸಲ ಕೈಯಿಂದ ಕಳೆ ತೆಗೆಯಬೇಕು.

ಬಿತ್ತನೆ: ಬಿತ್ತುವುದಕ್ಕಿಂತ 2–3 ವಾರಗಳ ಮುಂಚೆಯೇ ಸಾವಯವ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಬೇಕು. ಬಿತ್ತನೆ ಮಾಡುವುದಕ್ಕೆ ಮೊದಲು ಶಿಫಾರಿಸಿದ ಶೇ.50 ರಷ್ಟು ಸಾರಜನಕ, ಪೂರ್ತಿ ರಂಜಕ ಮತ್ತು ಪೊಟ್ಯಾಷ್ ಒದಗಿಸುವ ರಸಗೊಬ್ಬರಗಳನ್ನು ಮಣ್ಣಿನಲ್ಲಿ ಬೆರೆಸಿ, ಬೀಜವನ್ನು 45 ಸೆಂ.ಮೀ. ಅಂತರದ ಸಾಲುಗಳಲ್ಲಿ ಬಿತ್ತನೆ ಮಾಡಬೇಕು. ಬಿತ್ತನೆ ಮಾಡಿದ ಮೂರು ವಾರಗಳ ನಂತರ 10–15 ಸೆಂ.ಮೀ. ಅಂತರದಲ್ಲಿ ಒಂದು ಸಸಿಯನ್ನು ಉಳಿಸಿ, ಉಳಿದ ಸಸಿಗಳನ್ನು ಕಿತ್ತು ಹಾಕಬೇಕು. ಬಿತ್ತನೆಯಾದ 30 ದಿನಗಳ ನಂತರ ಉಳಿದ 20 ಕಿ.ಗ್ರಾಂ. ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡಬೇಕು.

ಬೀಜೋಪಚಾರ: ಶಿಫಾರಸು ಮಾಡಿದ ಅಜೋಸ್ಪಿರಿಲಂ ಮತ್ತು ರಂಜಕ ಕರಗಿಸುವ ಜೈವಿಕ ಗೊಬ್ಬರಗಳಿಂದ ಬೀಜೋಪಚಾರ ಮಾಡುವುದರಿಂದ ಶೇ. 25 ರಷ್ಟು ಸಾರಜನಕವನ್ನು ಉಳಿತಾಯ ಮಾಡಬಹುದು

ನೀರಾವರಿ ಮತ್ತು ಅಂತರ ಬೇಸಾಯ (ನೀರಾವರಿ)

ಮುಂಗಾರು ಹಂಗಾಮಿನಲ್ಲಿ ಹವಾಗುಣಕ್ಕನುಗುಣವಾಗಿ ಮರಳು ಮಣ್ಣಿನಲ್ಲಿ 10 ದಿನಗಳಿಗೊಮ್ಮೆ ಕಪ್ಪು ಮಣ್ಣಿನಲ್ಲಿ 2 ದಿನಗಳಿಗೆ ನೀರು ಹಾಯಿಸಬೇಕು. ಮುಖ್ಯವಾಗಿ ಕವಲು ಒಡೆಯುವ ತೆನೆ ಬರುವ ಮತ್ತು ಕಾಳು ಕಟ್ಟುವ ಹಂತಗಳಲ್ಲಿ ನೀರನ್ನು ತಪ್ಪದೆ ಹಾಯಿಸಬೇಕು. ಬೇಸಿಗೆಯಲ್ಲಿ ಕಪ್ಪು ಮಣ್ಣಿಗೆ ಒಟ್ಟು 7 ಬಾರಿ ಅಂದರೆ, ಬಿತ್ತನೆ ಮಾಡುವ ಸಮಯ ಬಿತ್ತನೆ ಮಾಡಿದ 20 ದಿನಗಳಲ್ಲಿ ಹಾಗೂ ತದನಂತರದಲ್ಲಿ ಪ್ರತಿ 10 ದಿನಗಳಿಗೊಮ್ಮೆ ನೀರು ಹಾಯಿಸಬೇಕು.

ಅಂತರ ಬೇಸಾಯ (ಖುಷ್ಕಿ)

ಕಳೆ ನಿಯಂತ್ರಣ (ನೀರಾವರಿ)

ಬಿತ್ತನೆ ಮಾಡಿದ ದಿನ ಅಥವಾ ಮರುದಿನ ಎಕರೆಗೆ 0.4 ಕಿ.ಗ್ರಾಂ. ಅಟ್ರಾಜಿನ್ ಶೇ. 50 ರ ನೀರಿನಲ್ಲಿ ಕರಗುವ ಪುಡಿಯನ್ನು 300 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿರಿ. ಕಳೆನಾಶಕವನ್ನು ಶಿಫಾರಿಸಿದ ಪ್ರಮಾಣಕ್ಕಿಂತ ಹೆಚ್ಚಾಗಿ ಸಿಂಪಡಿಸಿದಲ್ಲಿ ಬೀಜ ಸರಿಯಾಗಿ ಮೊಳಕೆ ಬರುವುದಿಲ್ಲ ಹಾಗೂ ಮೊಳಕೆ ಪ್ರಮಾಣ ಕಡಿಮೆಯಾಗುವುದು.

ಸಸ್ಯ ಸಂರಕ್ಷಣೆ:

ಅ. ಕೀಟಗಳು:

1. ಬೊಬ್ಬೆದುಂಬಿ ಮತ್ತು ರಸ ಹೀರುವ ತಿಗಣೆ

ಲಕ್ಷಣ: ಕಾಳು ಜೊಳ್ಳಾಗಿ ಕಪ್ಪಾಗಿ ಕಾಣುವುವು

ನಿರ್ವಹಣಾ ಕ್ರಮಗಳು: ಎಕರೆಗೆ 8 ಕಿ.ಗ್ರಾಂ. ಮೆಲಾಥಿಯಾನ್ ಶೇ. 5 ರ ಪುಡಿಯನ್ನು ತೆನೆಗಳ ಮೇಲೆ ಧೂಳೀಕರಿಸಬೇಕು

ಆ. ರೋಗಗಳು:

1. ತೆನೆ ಜಿಗಿರೋಗ:

ಲಕ್ಷಣ: ಸಕ್ಕರೆ ಪಾಕದಂತಹ ದ್ರವವು ತೆನೆಗಳಿಂದ ಜಿನುಗುವುದುಲ್ಲದೆ, ಎಲೆಗಳ ಮೇಲೆ ಬಿದ್ದು ಎಲೆ ಕಪ್ಪಾಗಿ ಕಾಣುವುವು. ಇದರಿಂದ ತೆನೆಗಳಲ್ಲಿ ಕಾಳಿನ ಸಂಖ್ಯೆ ಕಡಿಮೆಯಾಗುವುವು.

ನಿರ್ವಹಣಾ ಕ್ರಮಗಳು: ಶೇ. 75 ರಷ್ಟು ತೆನೆ ಬಂದೊಡನೆಯೇ 2.0 ಗ್ರಾಂ. ಜೈರಾಮ್ 80 ಡಬ್ಲು.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಇದು ಜುಲೈ ಕೊನೆಯಲ್ಲಿ ಹಾಗೂ ನಂತರ ಬಿತ್ತನೆ ಮಾಡಿದ ಬೆಳೆಗೆ ಅನ್ವಯಿಸುತ್ತದೆ.

2. ಎಲೆ ತುಕ್ಕು ರೋಗ

ಲಕ್ಷಣ: ಎಲೆಗಳ ಮೇಲೆ ಸಣ್ಣ ಸಣ್ಣ ಚುಕ್ಕೆಗಳಾಗಿ ಎಲೆಗಳು ತಾಮ್ರ ಬಣ್ಣಕ್ಕೆ ತಿರುಗುವುವು. ಇದರಿಂದ ಇಳುವರಿ ಕಡಿಮೆಯಾಗುವುದು.

ನಿರ್ವಹಣಾ ಕ್ರಮಗಳು: ತುಕ್ಕು ರೋಗ ಮತ್ತು ಕೇದಿಗೆ ರೋಗಗಳು ಕಂಡು ಬಂದಲ್ಲಿ 2.0 ಗ್ರಾಂ. ಜೈನೆಬ್ 75 ಡಬ್ಲು.ಪಿ ಅಥವಾ 2 ಗ್ರಾಂ. ಮ್ಯಾಂಕೊಜೆಬ್ 75 ಡಬ್ಲೂ.ಪಿ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸಬೇಕು. ಈ ರೋಗದ ಬಾಧೆ ಮತ್ತೆ ಕಂಡು ಬಂದಲ್ಲಿ ಪುನಃ ಇದೇ ಕ್ರಮ ಅನುಸರಿಸಬೇಕು.

3. ಕೇದಿಗೆ ರೋಗ (ಹಸಿರು ತೆನೆ ರೋಗ)

ಲಕ್ಷಣ: ಗಿಡಗಳ ಬೆಳವಣಿಗೆ ಕುಂಠಿತವಾಗುವುದು. ಎಲೆಗಳು ಹಳದಿ ಅಥವಾ ಕಂದು ಬಣ್ಣಕ್ಕೆ ತಿರುಗಿ, ಎಲೆಗಳ ತುದಿವರೆಗೆ ಅಗಲವಾದ ಗೆರೆಗಳು ಕಾಣುವುವು. ರೋಗ ಪೀಡಿತ ಸಸ್ಯಗಳಲ್ಲಿ ಹೆಚ್ಚಿನ ಕವಲುಗಳು ಬರುವುವು. ತೆನೆಗಳು ಭಾಗಶಃ ಅಥವಾ ಪೂರ್ತಿಯಾಗಿ ಹಸಿರು ಬಣ್ಣದ ಸಣ್ಣದಾದ ತಿರುಚಿದ ಎಲೆಗಳಾಗಿ ಪರಿವರ್ತನೆಯಾಗುವುವು. ಇದರಿಂದ ಶೇ. 60 ರಷ್ಟು ಇಳುವರಿ ಕಡಿಮೆಯಾಗುವುದು.

ನಿರ್ವಹಣಾ ಕ್ರಮಗಳು: ಕೇದಿಗೆ ರೋಗ ತಗುಲಿದ ಗಿಡಗಳನ್ನು ಬೇರು ಸಮೇತ ಕಿತ್ತು ನಾಶಪಡಿಸಬೇಕು.

ಇಳುವರಿ:

ನೀರಾವರಿ 30–33 ಕ್ವಿ ಕಾಳು 5 ಟನ್ ಮೇವಿನ ಇಳುವರಿ

ಖುಷ್ಕಿ: 15 ಕ್ವಿಂ ಕಾಳು 2.5 ಮೇವಿನ ಇಳುವರಿ

****